**TRANSLATED COPY**

# Proceedings of the Government of Karnataka

## Water Resources Department

**Sub**:- According Administrative approval for the revised proposal report involving a total project cost of Rs.125.17 Crores for construction of Tank at Kalluvaddahalla, Shikaripura Taluk, Shivamogga.

**Reference: -**

1. Managing Director, Karnataka Neeravari Nigam Limited, Bengaluru Letter No: KNNL/Technical/Kalluvaddahalla/others/2018-19/7444 Dt: 02.04.2019.
2. Managing Director, Karnataka Neeravari Nigam Limited, Bengaluru Letter No: KNNL/ Administrative Approval /Kalluvaddahalla/2019-20/2194 Dt: 26.07.2019.

**Preamble:**

As per the above letter cited under Ref (1), the Managing Director, Karnataka Neeravari Nigam Limited, Bengaluru proposed the project cost Rs.20.42 Crore for construction of Kalluvadduhalla tank which irrigates about 1950 ha and obtained administrative approval Government Order No. WRD 122 MMB 2004 dt: 30.08.2006 but the project not implemented due to required water allocation was not made for the project. Further, reported that the proposed project not implemented. further, the proposed project 0.647 TMC of water was allotted by the Master Plan Committee. After the allocation 0.647 TMC water for the project by Master Plan committee, project aims to irrigate 1950 Ha of land by constructing tank at Kalluvaddahalla, Shikaripura taluk. As per this proposal was placed before the 45$^{th}$ &48$^{th}$ Estimate Approval Committee held on 06.12.2018 and 23.01.2019 respectively approved for revised estimate and recommended for the Nigam approval. Further, the Detailed Project report of the project was placed before the 87$^{th}$ Board of Directors meeting held on 07.03.2019 directed to take up the project proposal involves the construction of tank at Kallavaddahalla, Shikaripura Taluk, Shivamogga and recommended the revised proposal report involving a total project cost of Rs.125.17 Crores based on the Standard rates of 2018-19 to submit the proposal to Government for obtaining the Administrative Approval. In view of this, the Managing Director, Karnataka Neeravari Nigam Limited, Bengaluru requested for issue of Administrative Approval of Rs. 125.17 Cr proposal based on the Standard rates of 2018-19 for construction of Tank at Kalluvadduhalla, Shikaripura Taluk,Shivamogga.

**TRANSLATED COPY**

With this background, the proposal was verified and the Order was issued as follows;

**Government Order No: WRD 13 MMB 2019,BangaloreDt:01.08.2019.**

Accorded Administrative approval for the revised project report estimate of 125.17 Crore based on the year 2018-19 SR rate for the construction of Kallavadduhalla Tank project, Shikaripura taluk, Shivamogga.

This order based on the conditions mentioned in Sub rule (2) of Rule-17 of Part-1 of the Karnataka Government (Transaction of Business) Rules, 1977

By order and in the Name of
Governor of Karnataka
Sd/-
(Shrihari S.R.)
Under Secretary of Government (Technical-1)
Water Resource Department

Copy To :

1) The Principal Accountant General (General and Social Sector, Audit), Karnataka, New Building, Audit Bhavan, PO Box No.5398, Bangalore-01.
2) The Principal Accountant General (Economic & Revenue Sector, Audit), Karnataka, New Building, Audit Bhavan, PO Box No.5398, Bangalore-01.
3) The Principal Accountant General (Administration & Economic Sector), Karnataka -01.
4) The Personal Secretary to Principal Secretary to Government (Cabinet), Case No.C:457/2019 dt: 01.08.2019
5) The Managing Director, Karnataka Neeravari Nigam Limited, Bengaluru.
6) The Chief Engineer, Upper Tunga Project Division, Shivamogga.
7) The Special Officer and the Deputy Secretary to Government, Finance Department (PWD Finance cell), Vidhana Soudha, Bangalore.
8) Guard File/Additional Copies.

**ಕರ್ನಾಟಕ ಸರ್ಕಾರದ ನಡವಳಿಗಳು**

**ಜಲ ಸಂಪನ್ಮೂಲ ಇಲಾಖೆ**

ವಿಷಯ:– ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಕಲ್ಲುವೊಡ್ಡಹಳ್ಳ ಹೊಸಕೆರೆ ನಿರ್ಮಾಣ ಯೋಜನೆಯ ರೂ.125.17 ಕೋಟಿಗಳ ಪರಿಷ್ಕೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:– 1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ಬೆಂಗಳೂರು ಇವರ ಪತ್ರ ಸಂಖ್ಯೆ:ಕನೀನಿ/ ತಾಂತ್ರಿಕ/ ಕಲ್ಲುವೊಡ್ಡಹಳ್ಳ /ಇತರೆ/2018–19/7444 ದಿನಾಂಕ:02.04.2019.

2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ಬೆಂಗಳೂರು ಇವರ ಪತ್ರ ಸಂಖ್ಯೆ: ಕನೀನಿ/ಆಡಳಿತಾತ್ಮಕ ಅನುಮೋದನೆ ಪ್ರಸ್ತಾವನೆಗಳು/2019–20/2194 ದಿನಾಂಕ:26.07.2019.

----***----

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರಗಳಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ, ಬೆಂಗಳೂರು ಇವರು, ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಕಲ್ಲುವೊಡ್ಡಹಳ್ಳ ಹೊಸ ಕೆರೆ ನಿರ್ಮಾಣ ಮಾಡಿ ಸುಮಾರು 1950 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆಯ ರೂ.20.42 ಕೋಟಿಗಳಿಗೆ ಸರ್ಕಾರದ ಆದೇಶ ಸಂ:ಜಸಂಇ 122 ಎಂಎಂಬಿ 2004 ದಿನಾಂಕ:30.08.2006 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ ಎಂದು ತಿಳಿಸುತ್ತಾ, ಯೋಜನೆಗೆ ಅವಶ್ಯವಾಗಿದ್ದ, ನೀರಿನ ಹಂಚಿಕೆಯಾಗದಿದ್ದ ಕಾರಣ, ಕಾಮಗಾರಿಯು ಅನುಷ್ಠಾನಗೊಂಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಮುಂದುವರೆದು, ಪ್ರಸ್ತುತ ಸದರಿ ಯೋಜನೆಗೆ ಮಾಸ್ಟರ್ ಪ್ಲಾನ್ ಕಮಿಟಿಯಲ್ಲಿ 0.647 ಟಿಎಂಸಿ ನೀರಿನ ಹಂಚಿಕೆಯಾಗಿರುತ್ತದೆ. ಆದ್ದರಿಂದ,ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಕಲ್ಲುವೊಡ್ಡಹಳ್ಳ ಹೊಸ ಕೆರೆ ನಿರ್ಮಾಣದ ಯೋಜನೆಗೆ ಮಾಸ್ಟರ್ ಪ್ಲಾನ್ ಕಮಿಟಿಯಲ್ಲಿ 0.647 ಟಿಎಂಸಿ ನೀರಿನ ಹಂಚಿಕೆಯಾಗಿದ್ದು, ಕಲ್ಲುವೊಡ್ಡಹಳ್ಳ ಹೊಸ ಕೆರೆ ನಿರ್ಮಾಣ ಮಾಡಿ ಸುಮಾರು 1950 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಅದರಂತೆ, ದಿನಾಂಕ:06.12.2018 ರಂದು ಜರುಗಿದ ನಿಗಮದ 45ನೇ ಅಂದಾಜು ಪರಿಶೀಲನಾ ಸಮಿತಿಯ ಸಭೆಯಲ್ಲಿ ಹಾಗೂ ದಿನಾಂಕ:23.01.2019 ರಂದು ಜರುಗಿದ 48ನೇ ಅಂದಾಜು ಪರಿಶೀಲನಾ ಸಮಿತಿಯ ಸಭೆಯಲ್ಲಿ ಯೋಜನಾ ವರದಿಯನ್ನು ಮಂಡಿಸಲಾಗಿ ಸಮಿತಿಯು ಯೋಜನೆಗೆ ತೀರುವಳಿ ನೀಡಿ, ಮಂಡಳಿಯ ಅನುಮೋದನೆಗೆ ಶಿಫಾರಸ್ಸು ಮಾಡಿರುತ್ತದೆ. ಯೋಜನೆಯ ವಿವರವಾದ ಯೋಜನಾ ವರದಿಯನ್ನು, ದಿನಾಂಕ:07.03.2019 ರಂದು ಜರುಗಿದ ನಿಗಮದ ನಿರ್ದೇಶಕರ ಮಂಡಳಿಯ 87ನೇ ಸಭೆಯಲ್ಲಿ ಮಂಡಿಸಲಾಗಿದ್ದು, ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಕಲ್ಲುವೊಡ್ಡಹಳ್ಳ ಹೊಸ ಕೆರೆ ನಿರ್ಮಾಣ ಯೋಜನೆಯನ್ನು ಹೊಸ ಯೋಜನೆಯನ್ನಾಗಿ ಕೈಗೊಳ್ಳುವಂತೆ ಸೂಚಿಸಿ, 2018–19ರ ದರಪಟ್ಟಿಯ ಅನ್ವಯ ತಯಾರಿಸಲಾಗಿರುವ ರೂ.125.17 ಕೋಟಿಗಳ ಪರಿಷ್ಕೃತ ಯೋಜನಾ ವರದಿಗೆ ಮಂಡಳಿಯು ಅನುಮೋದನೆ ನೀಡಿ, ಆಡಳಿತಾತ್ಮಕ ಅನುಮೋದನೆ ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ, 2018–19ರ ದರಪಟ್ಟಿ ಅನ್ವಯ ತಯಾರಿಸಲಾಗಿರುವ ರೂ.125.17 ಕೋಟಿಗಳ ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಕಲ್ಲುವೊಡ್ಡಹಳ್ಳ ಹೊಸ ಕೆರೆ ನಿರ್ಮಾಣ ಯೋಜನೆಯ ಪರಿಷ್ಕೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ರವರು ಕೋರಿರುತ್ತಾರೆ.

...2

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 16 ಎಂಎಂಬಿ 2019, ಬೆಂಗಳೂರು, ದಿನಾಂಕ:01.08.2019.**

ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಕಲ್ಲುವೊಡ್ಡಹಳ್ಳ ಹೊಸ ಕೆರೆ ನಿರ್ಮಾಣ ಯೋಜನೆಯ 2018-19ನೇ ಸಾಲಿನ ದರಪಟ್ಟಿಯನ್ವಯ ತಯಾರಿಸಲಾಗಿರುವ ರೂ.125.17 ಕೋಟಿಗಳ ಪರಿಷ್ಕೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಕರ್ನಾಟಕ ಸರ್ಕಾರದ (ವ್ಯವಹಾರಗಳ ನಿರ್ವಹಣೆ) ನಿಯಮಗಳು, 1977 ರ ಭಾಗ-I ರ ನಿಯಮ-17 ರ ಉಪ ನಿಯಮ (2)ರ ಪರಂತುಕದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶ್ರೀಹರಿ ಎಸ್.ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-1).
ಜಲ ಸಂಪನ್ಮೂಲ ಇಲಾಖೆ

ಪ್ರತಿಯನ್ನು:

1. ಪ್ರಧಾನ ಮಹಾಲೇಖಾಪಾಲರು, (ಸಾಮಾನ್ಯ ಮತ್ತು ಸಾಮಾಜಿಕ ವಲಯ, ಲೆಕ್ಕಪರಿಶೋಧನೆ). ಕರ್ನಾಟಕ ಹೊಸ ಕಟ್ಟಡ ಆಡಿಟ್ ಭವನ ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು 01.
2. ಪ್ರಧಾನ ಮಹಾಲೇಖಾಪಾಲರು, (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ), ಕರ್ನಾಟಕ ಹೊಸ ಕಟ್ಟಡ ಆಡಿಟ್ ಭವನ ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು 01.
3. ಪ್ರಧಾನ ಮಹಾಲೇಖಾಪಾಲರು, (ಲೆಕ್ಕಗಳು ಮತ್ತು ಹಕ್ಕುಸ್ವಾಮ್ಯ), ಕರ್ನಾಟಕ ಬೆಂಗಳೂರು 01.
4. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತಕಾರ್ಯದರ್ಶಿಗಳು (ಸಚಿವ ಸಂಪುಟ) ಪ್ರಕರಣ ಸಂ:ಸಿ:457/2019 ದಿನಾಂಕ:01.08.2019.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು.
6. ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನಾ ವಲಯ ಶಿವಮೊಗ್ಗ.
7. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ವ. ಆರ್ಥಿಕ ಕೋಶ) ವಿಧಾನ ಸೌಧ ಬೆಂಗಳೂರು.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.